ವಿವರಣೆಯನ್ನು ನೀಡಬೇಕೆಂದು ಮಾನ್ಯ ಶಿಕ್ಷಣ ಸಚಿವರನ್ನು ಕೋರುತ್ತೇನೆ. ಮೀಸಲಾತಿ ನೀತಿಯಂತೆ ನೇಮಕಾತಿ ಮಾಡಿಲ್ಲದಿದ್ದರೆ ಸಂಬಂಧಪಟ್ಟ ಶಿಕ್ಷಣ ಇಲಾಖೆಯ ನಿರ್ದೇಶಕರ ಮೇಲೆ ಕ್ರಮ ಕೈಗೊಳ್ಳುತ್ತೀರಾ?

ಶ್ರೀ ಎಂ. ವೀರಪ್ಪ ಮೊಯಿಲಿ : ಆಗಿನ ಕಾಲದಲ್ಲಿ ಇದ್ದಂತಹ ನಿಯಮಗಳ ಕೆಳಗೆ ಅವರು ನೇಮಕಾತಿಗಳನ್ನು ಮಾಡಿರುತ್ತಾರೆ. ಈಗ ಇರುವ ನಿಯಮಗಳಿಗೆ ಹೋಲಿಸಿದರೆ ಅದು ಕಡಿಮೆ ಇರಬಹುದು. ನಾನು ತಿಳಿದುಕೊಂಡ ಪ್ರಕಾರ ಏನು ನೇಮಕಾತಿ ಮಾಡಿದ್ದಾರೆ ಅದನ್ನು ಆಗಿನ ಕಾಲದಲ್ಲಿ ಚಾಲ್ತಿಯಲ್ಲಿ ಇದ್ದಂತಹ ನಿಯಮಗಳ ಪ್ರಕಾರ ಮಾಡಿದ್ದಾರೆ. ಆಗಿನ ನಿಯಮದ ಪ್ರಕಾರ ಪರಿಶಿಷ್ಟ ಜಾತಿ ಮತ್ತು ಪಂಗಡದವರು ಸಿಗದಿದ್ದರೆ ಇತರ ವರ್ಗಗಳಿಂದ ತುಂಬಿಕೊಳ್ಳಬಹುದಾಗಿತ್ತು. ಆದ್ದರಿಂದ ಈಗಿನ ನಿಯಮಗಳನ್ನು ಅನುಸರಿಸಿ ಈಗ ಮಾಡಲು ಬರುವುದಿಲ್ಲ.

ಶ್ರೀ ಎಂ. ನಾರಾಯಣ ಸ್ವಾಮಿ : ಶಿಕ್ಷಣ ಇಲಾಖೆಯ ನಿರ್ದೇಶಕರು ಕಾನೂನು ಉಲ್ಲಂಘನೆ ಮಾಡಿದ್ದಾರೆ. ಆದ್ದರಿಂದ ಅವರ ಮೇಲೆ ಕ್ರಮ ಕೈಗೊಳ್ಳುತ್ತೀರಾ?

ಶ್ರೀ ಎಂ. ವೀರಪ್ಪ ಮೊಯಿಲಿ : ಆಗ ಏನು ನಿಯಮಗಳು ಇತ್ತು ಅದಕ್ಕೆ ಅನುಸಾರವಾಗಿ ಅವರು ನೇಮಕಾತಿಗಳನ್ನು ಮಾಡಿದ್ದಾರೆ. ಆದ್ದರಿಂದ ಉಲ್ಲಂಘನೆಯ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಂ.ವಿ. ವೆಂಕಟಪ್ಪ : ಈ ಸಂಸ್ಥೆಯನ್ನು 1986ರಲ್ಲಿ ವಹಿಸಿಕೊಂಡರೂ ಕೂಡ ಅವರು ಲೈಬ್ರರಿ ಮತ್ತು ಇತರೆ ಮೂಮಬಲ್ಸ್ ಮಾತ್ರ ಕೊಟ್ಟಿದ್ದಾರೆ. ಅವರು ಪ್ರಾಪರ್ಟಿಯನ್ನು ಕೊಟ್ಟಿಲ್ಲ. ಕಟ್ಟಡವನ್ನು ಇನ್ನೂ ಸರ್ಕಾರದ ಸ್ವಾಧೀನಕ್ಕೆ ಕೊಟ್ಟಿಲ್ಲ. ನಾನು ಈ ಬಗ್ಗೆ ಮಾನ್ಯ ಮಂತ್ರಿಗಳಲ್ಲಿ ಪ್ರಸ್ತಾಪ ಮಾಡಿದ್ದೇನೆ. ಇನ್ನು 10 ದಿವಸದಲ್ಲಿ ಸೆಟಲ್‌ಮೆಂಟ್ ಮಾಡುತ್ತೇವೆಂದು ಹೇಳಿದರು. ಆದರೆ ಇಲ್ಲಿಯವರೆಗೆ ಏನೂ ಆಗಿಲ್ಲ. ಅದರ ರಿಪೇರಿಗೆ 5 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ. ಈಗ ಈ ಪ್ರಾಪರ್ಟಿಯನ್ನು ಹ್ಯಾಂಡ್ ಓವರ್ ಮಾಡದೆ ಇರುವುದರಿಂದ ನಾವು ಏನೂ ಕ್ರಮ ಕೈಗೊಳ್ಳಲು ಸಾಧ್ಯವಾಗಿಲ್ಲ. ಆದ್ದರಿಂದ ಇದನ್ನು ಹ್ಯಾಂಡ್ ಓವರ್ ಮಾಡಲು ಕ್ರಮ ಕೈಗೊಳ್ಳುತ್ತಿರಾ?

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ಈ ವಿಚಾರ ನನ್ನ ಗಮನಕ್ಕೆ ಬಂದಿದೆ. ಇದನ್ನು ನಾವು ಪರಿಶೀಲನೆ ಮಾಡುತ್ತೇವೆ.

ನೇಸರಗಿ ಗ್ರಾಮದಲ್ಲಿ ಸರ್ಕಾರಿ ಪದವಿ ಮಹಾವಿದ್ಯಾಲಯ

328 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಂದಿನ ಮಾನ್ಯ ಮುಖ್ಯಮಂತ್ರಿಗಳು ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕು ಪೈಕಿ ನೇಸರಗಿ ಗ್ರಾಮದಲ್ಲಿ ಸರ್ಕಾರಿ ಡಿಗ್ರಿ ಕಾಲೇಜು ಕಟ್ಟುವ ಸಲುವಾಗಿ ತಮ್ಮ ಕ್ರಮ ಸಂಖ್ಯೆ : ಸಿಎಂ: 1209 : ಎಮ್‌ಎಲ್‌ಎ (2) 90 ದಿನಾಂಕ 18-9-1990ರ ಕಾಲೇಜು ಕಟ್ಟಡ ಕಟ್ಟುವ ಸಲುವಾಗಿ ಅಂದಾಜು ವೆಚ್ಚ ಪತ್ರಿಕೆ ತಯಾರಿಸಲು ಆದೇಶ ನೀಡಿರುವುದು ನಿಜವೇ?

ಆ) ಹಾಗಿದ್ದಲ್ಲಿ ಅವರ ಆದೇಶ ಪ್ರಕಾರ ಸರ್ಕಾರಿ ಪದವಿ ಕಾಲೇಜು ಕಟ್ಟಡ ಕಟ್ಟಲು ಸರ್ಕಾರದವತಿ ಯಾವ ಕ್ರಮವನ್ನು ಕೈಗೊಂಡಿರುವರು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) :

ಅ) ನಿಜ.

ಆ) ಈ ಕಾಲೇಜಿನ ಕಟ್ಟಡ ಕಟ್ಟಲು ಸಧ್ಯದಲ್ಲಿ ನಿವೇಶನ ಇರುವುದಿಲ್ಲ.

1991-92ನೇ ಸಾಲಿನಲ್ಲಿ ಸರ್ಕಾರಿ ಕಾಲೇಜುಗಳಿಗೆ ನಿವೇಶನ ಒದಗಿಸಲು ರೂ. 25-00 ಲಕ್ಷಗಳನ್ನು ಮೀಸಲಾಗಿರಿಸಲಾಗಿದೆ. ಆದಕಾರಣ ಈ ಕಾಲೇಜಿಗೆ ಬೇಕಾದ ನಿವೇಶನವನ್ನು ದೊರಕಿಸಿಕೊಳ್ಳಲು ಕ್ರಮ ತೆಗೆದುಕೊಳ್ಳಲಾಗುವುದು ಮತ್ತು ಸದರಿ ಕಾಲೇಜಿನ ಕಟ್ಟಡದ ಬಾಬ್ತು ರೂ.8.00 ಲಕ್ಷಗಳನ್ನು ಒದಗಿಸಲಾಗಿದ್ದು 1991-92ನೇ ಸಾಲಿನಲ್ಲಿ ಈ ಕಾರ್ಯಕ್ರಮವನ್ನು ತೆಗೆದುಕೊಳ್ಳಲಾಗುವುದು.

ಶ್ರೀ ಶಿವಾನಂದ ಹೆಚ್. ಕೌಜಲಗಿ: ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ನೇಸರಗಿ ಗ್ರಾಮದಲ್ಲಿ ಡಿಗ್ರಿ 1991-92 ರಲ್ಲಿ ಸರ್ಕಾರಿ ಕಾಲೇಜಿನ ಕಟ್ಟಡ ಕಟ್ಟುವ ಸಲುವಾಗಿ 8 ಲಕ್ಷ ರೂಪಾಯಿಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದೆಯೆಂದು ತಿಳಿಸಿದ್ದಾರೆ. ಅದಕ್ಕಾಗಿ ಹಿಂದಿನ ಮುಖ್ಯಮಂತ್ರಿಯಾದ ಶ್ರೀ ವೀರೇಂದ್ರ ಪಾಟೀಲರು ಹಾಗೂ ಶಿಕ್ಷಣ ಮಂತ್ರಿಯಾದ ನಿಮಗೂ ಅಭಿನಂದನೆಯನ್ನು ಸಲ್ಲಿಸುತ್ತೇನೆ. ನಿಮ್ಮ ಸರ್ಕಾರಕ್ಕೂ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಈ ಕಾಲೇಜಿನ ಕಟ್ಟಡ ಕಟ್ಟಲು ಜಾಗವಿಲ್ಲವೆಂದು ಹೇಳಿದ್ದೀರಿ. ಸರ್ಕಾರಿ ಜೂನಿಯರ್ ಕಾಲೇಜಿನಲ್ಲಿ 5 ಎಕರೆ 36 ಗುಂಟೆ ಜಮೀನು ಇದೆ. ಶ್ರೀ ವೀರೇಂದ್ರ ಪಾಟೀಲರು ಅದರ ಪಕ್ಕದಲ್ಲಿಯೇ ಈ ಕಟ್ಟಡವನ್ನು ಕಟ್ಟಿ ಎಂದು ಆರ್ಡರ್ ಮಾಡಿದರು. ಆ ಆರ್ಡರ್ ಪ್ರಕಾರ ಸರ್ಕಾರ ಅಲ್ಲಿ ಕಟ್ಟಡವನ್ನು ಕಟ್ಟುತ್ತದೆಯೇ? ಈಗಾಗಲೇ ನರ್ಸ್ ಕ್ವಾರ್ಟ್ರ್ಸ್‌ನಲ್ಲಿ ಈ ಕಾಲೇಜು ನಡೆಯುತ್ತಿದೆ. ಆ ಕಾರಣದಿಂದ, ಎಷ್ಟು ದಿವಸದಲ್ಲಿ ಇದನ್ನು ಕಟ್ಟುತ್ತೀರೆಂದು ಕೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಈಗ ಸರ್ಕಾರಿ ಜ್ಯೂನಿಯರ್ ಕಾಲೇಜಿನ ನಿವೇಶನದಲ್ಲಿ ಈ ಪ್ರಥಮ ಹಂತದ ಕಾಲೇಜಿನ ಕಟ್ಟಡವನ್ನು ಕಟ್ಟಬೇಕೆಂದು ಸೂಚನೆ ಮಾಡಿದ್ದಾರೆ. ಆದರೆ ಅದು ಎಷ್ಟು ಯುಕ್ತವಾದುದು ಎಂದು ತಾವೇ ಆಲೋಚನೆ ಮಾಡಬೇಕಾಗಿದೆ. ಏಕೆಂದರೆ ಪ್ರಥಮ ದರ್ಜೆಯ ಕಾಲೇಜಿನ ವಾತಾವರಣವೇ ಬೇರೆಯಾಗಿರುತ್ತದೆ. ಮಾನಸಿಕ ತಜ್ಞರು, ಶಿಕ್ಷಣ ತಜ್ಞರು ಇದರ ಬಗ್ಗೆ 10+2 ಒಂದು ಹಂತದಲ್ಲಿ ಇರಬೇಕೆಂದು ಅಭಿಪ್ರಾಯ ಪಟ್ಟಿದ್ದಾರೆ. ಈ ಪ್ರಥಮ ದರ್ಜೆ ಹಂತದ ವಿದ್ಯಾರ್ಥಿಗಳ ಮಾನಸಿಕ ಮಟ್ಟವೇ ಬೇರೆಯಾಗಿರುತ್ತದೆ. ಎಲ್ಲರನ್ನೂ ಒಂದೇ ಕ್ಯಾಂಪಸ್‌ನಲ್ಲಿ ಹಾಕಿದರೆ ಅದು ಅಷ್ಟು ಯುಕ್ತವಾಗಿರುವುದಿಲ್ಲ. ಏಕೆಂದರೆ, ಮುಂದಿನ ವಿಚಾರವನ್ನು ಕೂಡ ನಾವು ಯೋಚನೆ ಮಾಡಬೇಕಾಗುತ್ತದೆ. ಒಂದು ನಿವೇಶನ ಸಿಕ್ಕರೆ ಸಾಕು ಕಟ್ಟಡವನ್ನು ಕಟ್ಟಿ ಪ್ರಥಮ ದರ್ಜೆಯ ಕಾಲೇಜನ್ನು ಪ್ರಾರಂಭ ಮಾಡೋಣ ಎನ್ನುವ ನಿಮ್ಮ ಅನಿಸಿಕೆ ಸರಿಯೇ, ಹೌದು. ಅದರ ಮುಂದೆ ಬರುವಂಥ ಶಿಕ್ಷಣ ವ್ಯವಸ್ಥೆಯಲ್ಲಿ ಇದು ಎಷ್ಟು ಯುಕ್ತವಾಗಿರುತ್ತದೆ ಎಂಬುದನ್ನು ಕೂಡ ನಾವು ಆಲೋಚನೆ ಮಾಡಬೇಕು. ನಮ್ಮಲ್ಲಿ ಹಣವಿದೆ, ತಾವು ಒಂದು ಜಾಗತೆಗೆದುಕೊಂಡರೆ it is worthwhile. ಜಾಗ ನೋಡಿದ ಕೂಡಲೇ ಕಟ್ಟಡ ಕಟ್ಟಬೇಕೆಂದು ಹೇಳುವುದು ತಪ್ಪು. ಏಕೆಂದರೆ, ಯಾವಾಗಲೂ ಶಿಕ್ಷಣಕ್ಕೆ ಪರಿಸರದ ಪ್ರಾಧಾನ್ಯತೆಯಿರುತ್ತದೆ. ಆದುದರಿಂದ ಒಳ್ಳೆಯ ಪರಿಸರ ಹುಡುಕಿ ಮಾಡಬೇಕಾದರೆ ಅದು ಒಳ್ಳೆಯ ಕಾಲೇಜಾಗಲಿ ಎಂದು ನಾನು ಹೇಳುತ್ತೇನೆ. It is a pious hope. ಇದು ನನ್ನ ಒಂದು ಇಚ್ಛೆಯಷ್ಟೆ, ಅದನ್ನು ಸ್ವೀಕಾರ ಮಾಡುವುದು ಬಿಡುವುದು ನಿಮಗೆ ಸೇರಿದ್ದು.

(ಗೊಂದಲ)

ಶ್ರೀ ಶಿವಾನಂದ ಹೆಚ್. ಕೌಜಲಗಿ : ಮಾನ್ಯ ಮಂತ್ರಿಗಳು ಕೊಟ್ಟಂತಹ ಸಲಹೆ ಯೋಗ್ಯವಾದುದು. ಒಳ್ಳೆಯ ಉದ್ದೇಶದಿಂದ ಕೊಟ್ಟಿರುತ್ತಾರೆ. ಈ ಎರಡು

ಕಾಲೇಜುಗಳನ್ನು ಸ್ಥಾಪನೆ ಮಾಡುವುದಕ್ಕೆ ಆ ಊರಿನ ಜನ 5 ಎಕರೆ 36 ಗುಂಟೆ ಭೂಮಿಯನ್ನು ದಾನವಾಗಿ ಕೊಟ್ಟಿದ್ದಾರೆ. ಎರಡು ಎಕರೆ ಭೂಮಿ ಜ್ಯೂನಿಯರ್ ಕಾಲೇಜಿಗೆ ಸಾಕು ಹಾಗೂ ಮೂರು ಎಕರೆ 36 ಗುಂಟೆ ಪ್ರಥಮ ದರ್ಜೆ ಕಾಲೇಜಿಗೆ ಸಾಕಾಗುತ್ತದೆ. ಈ ಜಾಗ ಕಾಲೇಜಿಗೆ ಯೋಗ್ಯವಾಗಿರುವುದರಿಂದ ಹಿಂದಿನ ಮುಖ್ಯ ಮಂತ್ರಿಗಳಾದ ಶ್ರೀಮಾನ್ ವೀರೇಂದ್ರ ಪಾಟೀಲರು ಈ ಸ್ಥಳಕ್ಕೆ ಭೇಟಿ ನೀಡಿದ್ದಾಗ ಸ್ಪಾಟ್‌ನಲ್ಲೇ ಆರ್ಡರ್ ಮಾಡಿದರು. ಅಂದಿನ ಮುಖ್ಯ ಮಂತ್ರಿಗಳ ಆರ್ಡರ್ ಪ್ರಕಾರ ಆರ್‌ಕಿಟೆಕ್ಟನ್ನು ಕರೆಸಿ ಸ್ಪಾಟ್ ಇನ್‌ಸ್ಪೆಕ್ಷನ್ ಮಾಡಿದ ಮೇಲೆ ಅವರು ನಕ್ಷೆಯನ್ನು ಸಹ ತಯಾರು ಮಾಡಿ ಇದು ಒಳ್ಳೆಯ ಸ್ಥಳವೆಂದು ಅಭಿಪ್ರಾಯ ಕೊಟ್ಟಿದ್ದಾರೆ. ಈ ಭೂಮಿ ಊರಿನ ಹೊರಗಿದೆ, ಹಾಗು ಕಾಲೇಜುಗಳನ್ನು ಸ್ಥಾಪನೆ ಮಾಡುವುದಕ್ಕೆ ಸಾಕಾಗುವುದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ಈ ಎರಡು ಕಾಲೇಜುಗಳನ್ನು ಈ ಜಮೀನಿನಲ್ಲೇ ಕಟ್ಟಿಸಿಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಕೆಲವು ವಿಚಾರಗಳಲ್ಲಿ ಇಂಡಿವಿಜ್ಯೂಯಲ್ ಅಭಿಪ್ರಾಯ ತೆಗೆದುಕೊಂಡ ನಾವು ನಿರ್ಣಯವನ್ನು ತೆಗೆದುಕೊಳ್ಳಬಾರದು, ಏಕೆಂದರೆ, ಅದು ಪೊಲಿಟಿಕಲ್ ಡಿಸಿಷನ್ ಆಗಬಾರದು. ಅದನ್ನು ತಜ್ಞರ ಅಭಿಪ್ರಾಯಕ್ಕೆ ಬಿಡಬೇಕು. ಏನೇ ಆಗಲಿ, ನೀವು ಸೂಚನೆ ಕೊಟ್ಟಿದ್ದೀರಿ, ನಾನು ಶಿಕ್ಷಣ ನಿರ್ದೇಶಕರನ್ನು ಕಳುಹಿಸಿ ಇದರ ಬಗ್ಗೆ ವರದಿಯನ್ನು ತರಿಸಿ ನಂತರ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಪವರ್ ಟಿಲ್ಲರ್ಸ್ / ಟ್ರೈಲರ್‌ಗಳಿಗೆ ಅರ್ಹತಾ ಪ್ರಮಾಣ ಪತ್ರ ಹಾಗೂ ಮೋಟಾರು ವಾಹನ ತೆರಿಗೆಗಳಿಂದ ವಿನಾಯ್ತಿ.

1197 - ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ರೈತರು ಉಪಯೋಗಿಸುವ ಪವರ್ ಟಿಲ್ಲರ್ ಟ್ರೈಲರ್‌ಗಳ ಮೇಲೆ ತೆರಿಗೆ ವಿಧಿಸುತ್ತದೆಯೇ?

ಆ) ಹಾಗಿದ್ದಲ್ಲಿ, ವಿಧಿಲಾಗುತ್ತಿರುವ ತೆರಿಗೆ ಮೊತ್ತ?

ಇ) ಪವರ್ ಟಿಲ್ಲರ್ - ಟ್ರೈಲರುಗಳಿಗೆ ಅರ್ಹತಾ ಪತ್ರ (ಎಫ್.ಸಿ) ಪಡೆಯುವ ಅವಶ್ಯತೆ ಇದೆಯೆ?

ಈ) ಹಾಗಿದ್ದಲ್ಲಿ ಸರ್ಕಾರದ ಮುಂದೆ ಪವರ್ ಟಿಲ್ಲರ್ - ಟ್ರೈಲರ್‌ಗಳಿಗೆ ಎಫ್.ಸಿ. ಮತ್ತು ಮೋಟಾರು ವಾಹನ ತೆರಿಗೆಯಿಂದ ವಿನಾಯಿತಿ ನೀಡುವ ಪ್ರಸ್ತಾವನೆ ಇದೆಯೆ?

ಉ) ಇಲ್ಲವಾಗಿದ್ದಲ್ಲಿ ಅದಕ್ಕೆ ಕಾರಣಗಳು?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು) :

ಅ) ಹೌದು.

1-4-90 ಅನ್ವಯವಾಗುವಂತೆ ವಾಹನದ ವಯೋಮಾನಕ್ಕನುಗುಣವಾಗಿ ಜೀವಾವಧಿ ತೆರಿಗೆ ವಿಧಿಸಲಾಗುತ್ತದೆ.

ಆ) ಅನುಬಂಧದಲ್ಲಿ ತೋರಿಸಿರುವಂತೆ.

ಇ) ಹೌದು.

ಈ) ಇಲ್ಲ.